

ತಲುಪಿದ್ದ ಅಡ್ವೊಕೇಟ್ ಮಹೇಶ. ಕೆಲಸಗಳನ್ನು ಮುಗಿಸಿ ರಾತ್ರಿ ಮರಳಿ ಊರಿಗೆ ರೈಲು ಹತ್ತಿದ್ದ. ರಾತ್ರಿ ಊಟ ಮಾಡಿ ಮಡದಿ ಪೂಜಾಳೊಡನೆ ಮಾತನಾಡುವ ಸ್ವಲ್ಪ ವೇಳೆಯಲ್ಲಿಯೇ ಸಿಗ್ನಲ್ ಸಿಗದೆ ಕರೆ ಸ್ಥಗಿತಗೊಂಡಿತು. ಮತ್ತೆ ಕರೆ ಮಾಡಲು ಪ್ರಯತ್ನಿಸಿದರೂ ಸಂಪರ್ಕ ಸಿಗದೆ ಹೋಯಿತು. ಮೇಲಾಗಿ ಅದರ ಚಾರ್ಜ್ ಕೂಡಾ ಮುಗಿದಿದ್ದರಿಂದ ಮೊಬೈಲ್ ಅನ್ನು ಚಾರ್ಜಿಗೆ ಹಾಕಿ ಮರುದಿನ ಹಾಜರಾಗಬೇಕಾದ ಯಾವುದೋ ಮಹತ್ವದ ಪ್ರಕರಣದ ಫೈಲ್‌ವೊಂದನ್ನು ಓದುತ್ತಾ ಕುಳಿತ. ಅದನ್ನು ಓದಿ ಮುಗಿಸುವುದರೊಳಗೆ ಮಲಗುವುದಕ್ಕೆ ರಾತ್ರಿ ತುಂಬಾ ತಡವಾಗಿತ್ತು. ಪೂಜಾಳಿಗೆ ಮತ್ತೆ ಕರೆ ಮಾಡದೆ ಮಲಗಿದ್ದನು.

ಈಗ ಬೆಳಗ್ಗೆ ನೋಡಿದರೆ ಮನೆಯಿಂದ ಇಂತಹ ಆಘಾತಕಾರಿ ಕರೆ. ಗಡಿಯಾರ ನೋಡಿಕೊಂಡಾಗ, ಇನ್ನೇನು ಒಂದು ಗಂಟೆಯಲ್ಲಿಯೇ ಊರು ತಲುಪಬಹುದೆಂದು ಲಗುಬಗೆಯಲ್ಲಿ ಸಿದ್ಧನಾಗತೊಡಗಿದನು. ಎದೆಯಲ್ಲಿ ತಳಮಳ. ಕಿಟಕಿಯಾಚೆ ನೋಡಿದಾಗ ಇನ್ನೂ ಬೆಳಕಾಗಿರಲಿಲ್ಲ. ಹೊರಗೆ ಕತ್ತಲಲ್ಲಿ ಏನೂ ಕಾಣಿಸಲಿಲ್ಲ. ಊರು ಯಾವಾಗ ಬರುವುದೋ ಎಂದು ತವಕದಲ್ಲಿ ಅತ್ತ ಇತ್ತ ಅಡ್ಡಾಡತೊಡಗಿದನು. ಹಾಗೆಯೇ ಅಲ್ಲಿಯೇ ಹಲ್ಲುಜ್ಜಿಕೊಂಡನು. ಸ್ವಲ್ಪ ವೇಳೆಯ ನಂತರ ಕತ್ತಲು ಕರಗಿ ಬೆಳಕು ಮೂಡತೊಡಗಿತು. ಇನ್ನೇನು ಊರು ಹತ್ತಿರವೆಂದು ಬ್ಯಾಗನ್ನು ತೆಗೆದುಕೊಂಡು ಬಾಗಿಲ ಹತ್ತಿರ ಬಂದು ನಿಂತನು. ಸ್ವಲ್ಪ ವೇಳೆಯ ನಂತರ ಊರು ಬಂದಾಗ ಸ್ಟೇಶನ್ ಹತ್ತಿರವಾದಂತೆ ರೈಲಿನ ವೇಗ ಕಡಿಮೆಯಾಗತೊಡಗಿತು.

ರೈಲು ನಿಂತ ಕೂಡಲೇ ಮಹೇಶ ರೈಲಿನಿಂದ ಇಳಿದು ಫ್ಲಾಟ್‌ಫಾರ್ಮ್‌ನಲ್ಲಿ ಅವಸರದಿಂದಲೇ ನಡೆದನು. ಕಾಯುತ್ತ ನಿಂತಿದ್ದ ಶಿವರಾಜ ಓಡಿ ಬಂದು ಬ್ಯಾಗ್ ತೆಗೆದುಕೊಂಡು ನಡೆದಾಗ, ಮಹೇಶ ಅವನ ಹಿಂದೆಯೇ ಸ್ಟೇಶನ್ ಹೊರಗೆ ನಿಲ್ಲಿಸಿದ್ದ ತನ್ನ ಕಾರಿನತ್ತ ವೇಗವಾಗಿ ಧಾವಿಸಿದನು. ಕಾರನ್ನು ಹತ್ತಿ ಶಿವರಾಜನಿಗೆ ಬೇಗ ಆಸ್ಪತ್ರೆಗೆ ಹೋಗಲು ತಿಳಿಸಿ ಮ್ಲಾನವದನದಲ್ಲಿ ಕುಳಿತನು.

***

ಕಾರು ಆಸ್ಪತ್ರೆಯ ಕಾರಿಡಾರಿನಲ್ಲಿ ಬಂದು ನಿಂತ ಕೂಡಲೇ ಮಹೇಶ ಅವಸರದಲ್ಲಿಯೇ ಇಳಿದು ಆಸ್ಪತ್ರೆ ಒಳಗೆ ಓಡುತ್ತಲೇ ನಡೆದನು. ಆತನಿಗಾಗಿ ಕಾಯುತ್ತ ನಿಂತಿದ್ದ ವಿನಾಯಕನನ್ನು ನೋಡಿ ಉದ್ವೇಗದಲ್ಲಿಯೇ ಅವನು 'ವಿನೂ, ಪೂಜಾ ಹೇಗಿದ್ದಾಳೆ? ಭಯವಿಲ್ಲ ತಾನೇ?' ಎಂದು ಪ್ರಶ್ನಿಸಿದನು.

'ನೋಡು, ನೀನು ಎಕ್ಸೈಟ್ ಆಗಬೇಡ. ಮೊದಲು ನನ್ನ ಚೇಂಬರಿಗೆ ಹೋಗೋಣಂತೆ. ಅಲ್ಲಿಯೇ ನಿನಗೆ ಡೀಟೆಲ್ಸ್ ಹೇಳ್ತೀನಿ' ಎಂದು ವಿನಾಯಕ ಆತನನ್ನು ಕರೆದುಕೊಂಡು ತನ್ನ ಚೇಂಬರಿನತ್ತ ನಡೆದನು. ಅವರಿಬ್ಬರೂ ಚೇಂಬರಿಗೆ ಹೋದಾಗ ಅಲ್ಲಿ ಆಗಲೇ ಅವನ ತಾಯಿ ಗಿರಿಜಮ್ಮ ಅಳುತ್ತಾ ಕೂತಿದ್ದಳು. ಜೊತೆಗೆ ಮಹೇಶನ ಮಾವ ಗಂಗಾಧರಯ್ಯ ದುಃಖದಲ್ಲಿ ಕೂತಿದ್ದರು. ಇವರಿಬ್ಬರನ್ನು ಕಂಡ ಗಿರಿಜಮ್ಮ, 'ಮಹೀ, ಪೂಜಾಳಿಗೆ ಏನು ಆಗಿದೆಯಂಥ ವಿನೂ ಹೇಳ್ತಾಯಿಲ್ಲ ಕಣಪ್ಪ, ಏನೋ ಒಂದು ಸಣ್ಣ ಆಪರೇಷನ್ ಆಗಬೇಕಂತ ಹೇಳ್ತಾ ಇದ್ದಾನೆ. ನನಗೆ ಕೈಕಾಲೇ ಆಡ್ತಾ ಇಲ್ಲಪ್ಪ. ನೀನಾದ್ರೂ ಕೇಳೋ, ಪೂಜಾಳಿಗೆ ಏನಾಗಿದೆಯಂತ?' ಎನ್ನುತ್ತಾ ಬಿಕ್ಕಳಿಸತೊಡಗಿದಳು.

ವಿನಾಯಕ ಅವಳನ್ನು ಸಮಾಧಾನಪಡಿಸುತ್ತಾ ಗಂಗಾಧರನನ್ನು ಉದ್ದೇಶಿಸಿ, 'ಅತ್ತೆ–ದೊಡ್ಡಪ್ಪ, ನೀವಿಬ್ಬರೂ ಸ್ವಲ್ಪ ಹೊತ್ತು ಹೊರಗಿರಿ, ಮಹೀ ಜೊತೆ ಮಾತಾಡಿ ನಿಮ್ಮನ್ನ ಕರೀತೀನಿ' ಎಂದ. ಅಲ್ಲಿಯೇ ಇದ್ದ ನರ್ಸ್ ಒಬ್ಬಳು ಅವರಿಬ್ಬರನ್ನು ಹೊರಗೆ ಕರೆದುಕೊಂಡು ಹೋದಳು. ಅವರಿಬ್ಬರೂ ಹೊರಗೆ ಹೋದ ನಂತರ ಮಾತನಾಡಲು ಶುರು ಮಾಡಿದ ವಿನಾಯಕ 'ಮಹೀ, ಪೂಜಾ ಇತ್ತೀಚೆಗೆ ಸುಸ್ತು ಅಥವಾ ಕೈ ಜೋಮು ಹಿಡಿಯುವುದರ ಬಗ್ಗೆ ಏನಾದರೂ ಹೇಳಿದ್ದಳಾ?'

'ಇಲ್ವಲ್ಲ, ಯಾವತ್ತೂ ಅವಳು ಸುಸ್ತು ಎಂದು ಕೂತಿದ್ದೆ ನೋಡಿಲ್ಲ. ಪಾದರಸಕ್ಕಿಂತ ಚುರುಕಾಗಿ ಓಡಾಡತಾ ಇದ್ದಳಲ್ಲ. ನಿನಗೆ ಗೊತ್ತಿಲ್ಲದ್ದಾ? ಏನಾಯ್ತು ಹೇಳೋ?' ಎಂದು ಆತಂಕದ ಧ್ವನಿಯಲ್ಲಿ ಪ್ರಶ್ನಿಸಿದನು.

'ಹೇಳ್ತಿನಿ ಕಣೋ...' ಅವನ ಧ್ವನಿಯಲ್ಲೂ ಕಂಪನವಿತ್ತು.

'ಮತ್ತೇ ಹೇಳೋ... ಯಾಕೆ ಅಷ್ಟೊಂದು ತಡ ಮಾಡ್ತಿದ್ದಿಯಾ?' ಮಹೇಶನ ಧಾವಂತದ ಪ್ರಶ್ನೆ.

'ನನಗೆ ಹೇಗೆ ಹೇಳ್ಬೇಕೋ ಗೊತ್ತಾಗ್ತಿಲ್ಲ ಮಹೀ... ಪೂಜಾಳಿಗೆ ಕಾರ್ಡಿಯಾಕ್ ಅಟ್ಯಾಕ್...' ತಗ್ಗಿದ ನೋವಿನ ಧ್ವನಿಯಲ್ಲಿ ವಿನಾಯಕ ಹೇಳಿದಾಗ ಮಹೇಶ ಪಕ್ಕದಲ್ಲಿಯೇ ಬಾಂಬ್ ಬಿದ್ದವರಂತೆ ದಡಕ್ಕನೆ ಕುರ್ಚಿಯಿಂದ ಮೇಲೆದ್ದು, 'ಏನು ಹೇಳ್ತಾ ಇದ್ದಿಯಾ ನೀನು. ನೋ... ಇಟ್ಸ್ ನಾಟ್ ಪಾಸಿಬಲ್. ನೀನು ಸುಳ್ಳು ಹೇಳ್ತಾ ಇದ್ದಿಯಾ... ಪೂಜಾಳಿಗೆ ಹಾಗಾಗಲು ಸಾಧ್ಯಾನೇ ಇಲ್ಲ' ಎನ್ನುತ್ತಾ ಕಣ್ಣು ತುಂಬಾ ನೀರು ತುಂಬಿಕೊಂಡ. ಗೆಳೆಯನನ್ನು ಬಿಗಿದಪ್ಪಿದ ವಿನಾಯಕ, 'ಹೌದು ಮಹೀ, ನಮ್ಮ ಪೂಜಾಳಿಗೆ ಕಾರ್ಡಿಯಾಕ್ ಅಟ್ಯಾಕ್. ನಾನು ಹೇಳದೆ ಇದ್ದರೂ ಇದೇ ಸತ್ಯ. ನೋಡು ಈಗಾಗಲೇ ಇಸಿಜಿ ಮಾಡಿದ್ದಿನಿ. ಅದೂ ಅಬ್‌ನಾರ್ಮಲ್ ರಿಪೋರ್ಟ್ ಬಂದಿದೆ. ಈಗ ಆಂಜಿಯೊಗ್ರಫಿ ಮಾಡಿ ಬ್ಲಾಕೇಜ್ ಏನಾದರೂ ಕಂಡುಬಂದರೆ ಆಂಜಿಯೊಪ್ಲಾಸ್ಟಿ ಮಾಡಬೇಕು. ರಾತ್ರಿಯೇ ಎದೆನೋವು ಬಂದಿದೆ ಅವಳಿಗೆ. ಆದರೆ ಯಾರಿಗೂ ಹೇಳಿಲ್ಲ ಅವಳು' ಎಂದೊಡನೆ ಮಹೇಶನ ಕಣ್ಣಲ್ಲಿ ಧಾರಾಕಾರ ನೀರು.

ಅಲ್ಲಿಯೇ ಚೇರಿನಲ್ಲಿ ಕುಸಿದು ಕುಳಿತ ಅವನಿಗೆ ಏನು ಮಾತನಾಡಬೇಕೋ ತಿಳಿಯಲಿಲ್ಲ. ವಿನಾಯಕನೇ, 'ನೋಡು ಮಹೀ, ನೀನೇ ಈ ರೀತಿ ಧೈರ್ಯಗೆಟ್ಟರೆ ಉಳಿದವರ ಗತಿಯೇನು? ಬೀ ಬ್ರೇವ್, ನೋಡು ನಿನಗೆ ಎಷ್ಟು ದುಃಖ, ನೋವಿದೆಯೋ ಅಷ್ಟೇ ದುಃಖ ನನ್ನ ಎದೆಯಲ್ಲೂ ಇದೆ. ಅದನ್ನು ನುಂಗಿಕೊಂಡು ನಾನು ಮಾತನಾಡುತ್ತಿದ್ದೇನೆ. ನಿನ್ನ ಹಾಗೂ ಪೂಜಾಳ ಸಾಂಗತ್ಯ ಐದು ವರ್ಷದ್ದು. ತಂಗಿಯಾಗಿ ಅವಳದು ನನ್ನದು ಮೂವತ್ತು ವರ್ಷದ ಅನುಬಂಧ ಕಣೋ'.

'ಏನು ಮಾಡಲಿ ವಿನೂ, ನನಗೆ ದಿಕ್ಕೇ ತೋಚುತ್ತಿಲ್ಲ...'

'ಧೈರ್ಯ ತಗೋಬೇಕು ಅಷ್ಟೇ. ನೋಡು ನಮಗೆ ಹೆಚ್ಚಿಗೆ ಮಾತಾಡುವಷ್ಟು ವೇಳೆಯಿಲ್ಲ...'

'ಆಯ್ತು, ಹಾಗಾದರೆ ನೀನು ಆಪರೇಷನ್‌ಗೆ ಸಿದ್ಧ ಮಾಡಿಕೊಂಡು ಬಿಡು'.

'ಇಲ್ಲ, ಆಂಜಿಯೊಗ್ರಫಿ ಮಾಡಿದ ಮೇಲೆ ಬ್ಲಾಕೇಜ್ ಕಂಡು ಬಂದರೆ ಆಂಜಿಯೊಪ್ಲಾಸ್ಟಿ ಮಾಡಬೇಕಾಗುತ್ತೆ. ಅದಕ್ಕೆ ಇಲ್ಲಿಯೇ ಮಾಡಬೇಕೋ ಅಥವಾ ಬೇರೆ ಯಾವ ಸಿಟಿಗಾದರೂ ಹೋಗಿ ಮಾಡಿಸಬೇಕೋ ಎನ್ನುವ ಯೋಚನೆಯಲ್ಲಿದ್ದೇನೆ ನಾನು'.

'ಅಷ್ಟು ಸಮಯ ಇದೆಯಾ ನಮ್ಮಲ್ಲಿ...?'

'ನೋಡು, ಸಮಯದ ಜೊತೆ ಪೋಸ್ಟ್ ಆಪರೇಷನಲ್ ಸಿಚುವೇಷನ್‌ದ ಆಲೋಚನೆ ನನ್ನದು. ಏನಾದರೂ ಕಾಂಪ್ಲಿಕೇಷನ್ ಆದ್ರೆ... ಐಯಾಮ್ ಥಿಂಕಿಂಗ್ ಅಬೌಟ್ ದ್ಯಾಟ್'.

'ಸರಿ, ಯಾವುದಾದರೂ ಡಿಸಿಷನ್‌ಗೆ ಬೇಗ ಬಂದುಬಿಡು ನೀನು. ಹೌದು, ಪೂಜಾ ಎಲ್ಲಿ ಈಗ? ನಾನು ಅವಳನ್ನು ನೋಡಬೇಕು' ಎಂದು ಅವಸರಿಸಿದ ಮಹೇಶ.

ವಿನಾಯಕ ಬೆಲ್ ಮಾಡಿದಾಗ ಒಳಬಂದ ಅಟೆಂಡರ್‌ಗೆ ಹೊರಗಿದ್ದ ಗಂಗಾಧರಯ್ಯ ಹಾಗೂ ಗಿರಿಜಮ್ಮನನ್ನು ಒಳಗೆ ಕಳಿಸಲು ಹೇಳಿದಾಗ ಅವರಿಬ್ಬರೂ ಒಳಗೆ ಬಂದರು. ಗಿರಿಜಮ್ಮ ಅಳುತ್ತಲೇ ಬಂದಾಗ, 'ಅತ್ತೆ, ನೀವೇನೂ ಗಾಬರಿ ಆಗಬೇಡಿ. ಪೂಜಾಳಿಗೆ ಏನೂ ಆಗುವುದಿಲ್ಲ. ದೇವರಿದ್ದಾನೆ ಎಂದು ಅವರಿಗೆ ಧೈರ್ಯ ಹೇಳುತ್ತಾ ಅಲ್ಲಿಯೇ ಕುಳಿತುಕೊಳ್ಳಲು ಹೇಳಿ ಮಹೇಶನನ್ನು ತನ್ನ ಜೊತೆ ಕರೆದುಕೊಂಡು ಪೂಜಾಳಿದ್ದ ವಾರ್ಡ್‌ಗೆ ಹೊರಟನು. ಇಬ್ಬರೂ ಪೂಜಾ ಮಲಗಿದ್ದ ಬೆಡ್ ಪಕ್ಕದಲ್ಲಿ ಬಂದು ನಿಂತಾಗ, ಪೂಜಾ ತನ್ನ ಬಲಗೈನ್ನು ಎದೆಯ ಎಡಭಾಗದ ಮೇಲೆ ಇಟ್ಟುಕೊಂಡು ಮಲಗಿದ್ದಳು. ನೋವಿನಿಂದ ಮುಖ ಕಿವುಚಿಕೊಂಡು ವೇದನೆಯಲ್ಲಿರುವುದು ನೋಡಿ ಮಹೇಶ 'ಪೂಜಾ...' ಎನ್ನುತ್ತಾ ಅವಳ ಪಕ್ಕ ಕುಳಿತನು.

ಅವನ ಧ್ವನಿ ಕೇಳಿ 'ಈಗ ಬಂದ್ರಾ...' ಎನ್ನುವ ಅವಳ ಮಾತು ಎಲ್ಲೋ ದೂರದಿಂದ ಕೇಳಿ ಬರುವ ಕ್ಷೀಣ ನುಡಿಯಂತಿತ್ತು. ಮುಖದಲ್ಲಿ ನರಳಿಕೆಯ ಛಾಯೆ ದಟ್ಟವಾಗಿ ಕಾಣುತ್ತಿತ್ತು. ರಾತ್ರಿಯಿಂದಲೂ ನಿದ್ದೆಯಿಲ್ಲದ ಬಳಲಿಕೆಯು ತಾಂಡವವಾಡುತ್ತಿತ್ತು. ದಿನಾಲೂ ಕೋರ್ಟಿನಿಂದ ಬಂದ ಕೂಡಲೇ ಸ್ವಾಗತಿಸುವ ನಗುಮೊಗ ಇದೇನಾ ಅನಿಸಿತು ಅವನಿಗೆ. ಒಂದೇ ದಿನದಲ್ಲಿ ಮುಖವೆಂಬುವುದು ನೀರಿಲ್ಲದೆ ಬಾಡಿದ ಸುಮದಂತಾಗಿತ್ತು. ಮಹೇಶ ಅವಳ ಕೈಯನ್ನು ಕಕ್ಕುಲಾತಿಯಿಂದ ತನ್ನ ಕೈಯಲ್ಲಿ ಹಿಡಿದುಕೊಂಡು 'ಹೇಗಿದ್ದಿಯಾ ಪೂಜಾ...?' ಎಂದನು.

'ನೋವಿನಿಂದ ಮಾತನಾಡಲೂ ಆಗುತ್ತಿಲ್ಲಾ ರೀ...' ಅವಳು ಮಾತನಾಡಲು ಪ್ರಯತ್ನಿಸಿದರೂ ನೋವಿನಿಂದ ಮುಂದಿನ ಮಾತು ಹೊರಗೆ ಬರಲೇ ಇಲ್ಲ. ಮುಖವನ್ನು ನೋವಿನಿಂದ ಮತ್ತೆ ಕಿವುಚಿ ಕತ್ತನ್ನು ಎಡಗಡೆಗೆ ಹೊರಳಿಸಿದಳು. ಆ ನೋವಿನ ಬಾಧೆಯಿಂದ ಮಾತನಾಡಬೇಕೆಂದರೂ